ಟಿ.ಎಸ್. ಪ್ರತಿಭಾ, ಚಿತ್ರದುರ್ಗ
ಟೀವಿ ಮೂರ್ಖರ ಪೆಟ್ಟಿಗೆ ಆದರೆ, ಮೊಬೈಲ್?



ಹಿತ–ಶತ್ರು, ಕಾಲಖೂನಿ.

ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ
ಚುನಾವಣೆಯಲ್ಲಿ ಇದೇ ನನ್ನ ಕೊನೆಯ ಚುನಾವಣೆ ಎನ್ನುವವರ ಮರ್ಮವೇನು?
ಕೊನೆ ಎಂದರೆ ಚಿಗುರು. ಕೊನೆಯ ಎಂದರೆ ಅವನ ಚಿಗುರುಗಳಾದ ಮಗನ, ಮೊಮ್ಮಗನ...

ಕಾಳೀಹುಂಡಿ ಶಿವಕುಮಾರ್, ಮೈಸೂರು
ಅಳಿದ ಮೇಲೂ ಉಳಿಯಲು ಏನು ಮಾಡಬೇಕು?
ನಿಮ್ಮದೇ ಕಣ್ಣುಗಳಿಂದ ಫ್ಯೂಚರ್ ಬ್ಯೂಟಿಗಳನ್ನು ನೋಡುವ ಸಲುವಾಗಿ ನೇತ್ರದಾನ ಮಾಡಿ.

ವಿ. ಹೇಮಂತಕುಮಾರ್, ಬೆಂಗಳೂರು
ರೆಡಿಮೇಡ್ ಬಂದ ಮೇಲೆ ಬಟ್ಟೆ ಹೊಲಿಸುವವರು ಕಡಿಮೆಯಾಗಿದ್ದಾರಲ್ಲ, ಟೈಲರ್‌ಗಳ ಗತಿ?



ಆಲ್ಟ್ರೇಷನ್‌ನಲ್ಲೇ ಐಷಾರಾಮಿ ಬದುಕು ನಡೆಸಬಹುದಂತೆ.

ಅಮರಯ್ಯಾ ಪತ್ರಿಮಠ, ಸುರಪುರ
ಊಟಕ್ಕೆ ಉಪ್ಪಿನಕಾಯಿ. ಬದುಕಿಗೆ?
‘ಮಾವನ ಕಾಯಿ’ ಎಂದನಾ ಮನೆಯಳಿಯ.

ಸಂತೆಬೆನ್ನೂರು ಮಂಜಪ್ಪ, ಭದ್ರಾವತಿ
ಗುಂಡು ಹಾಕಿಕೊಂಡವರು ಕೇಳಿದ ಪ್ರಶ್ನೆಗಳಿಗೆ ಸತ್ಯವಾಗಿ ಉತ್ತರಿಸುವರಂತೆ. ನಿಮ್ಮ ಮೇಲೆ ಅನುಮಾನವಿದೆಯಲ್ಲ...?
ದಿಟ ಸರ್, ನನ್ನ ಸರದಲ್ಲಿ ಗುಂಡುಗಳಿವೆ.

ರಘುನಾಥರಾವ್ ತಾಪ್ಸೆ, ದಾವಣಗೆರೆ
ಸುಧಾ, ನಿನ್ನಂತೆ ನಾನೂ ಸೀನಿಯರ್ ಸಿಟಿಜನ್. ಬಸ್ಸು, ರೈಲಲ್ಲಿರುವಂತೆ ನಿನ್ನ ಖರೀದಿಯಲ್ಲೂ ರಿಬೇಟ್ ನೀಡೆಯಾ?
ಸೀನಿಯರ್ ಸಿಟಿಜನ್ ಕಾರ್ಡ್ ತರಹವೇ ಆನ್ಯುವಲ್ ಸಬ್‌ಸ್ಕ್ರಿಪ್ಷನ್ ಕಾರ್ಡ್ ಮಾಡಿಸ್ಕೊಂಡ್ರೆ ಕೊಡ್ತೀನಿ.

ಪಿ.ಜೆ. ರಾಘವೇಂದ್ರ ಮೈಸೂರು
ರಾಜಕಾರಣವು ಕುಟುಂಬದೊಳಗೋ, ಕುಟುಂಬವೇ ರಾಜಕಾರಣದೊಳಗೋ?
‘ಡೌಟೇ ಬೇಡ. ಕುಟುಂಬವೇ ರಾಜಕಾರಣದೊಳಗೆ’ ಎಂದಿತು ಮಕ್ಕಳಿಗಾಗೇ ಇರುವ ಪಿತೃಪಕ್ಷಗಳು.

ಜಯತೀರ್ಥ ಶ್ರೀಪತಿ, ಹುಬ್ಬಳ್ಳಿ
‘ಟ’ಕಾರದ ಟಿಕೆಟ್‌ಗೂ, ಟೆಂಪಲ್ ರನ್‌ಗೂ ಏನು ಸಂಬಂಧ?
ನಾಮ ಬಳಿದುಕೊಂಡು ಜನಕ್ಕೆ ನಾಮ ಹಾಕಲು ಟೆಂಪಲ್ ರನ್ನೇ ಸೂಕ್ತ ಟಿಕೆಟ್ ಅಂತೆ.

ಮೀನಾಕ್ಷಿ ರಾಮಗುಂಡಿ, ಬೈಲಹೊಂಗಲ
ಮತ ನೀಡುವುದೋ, ಮತದಾನ ಮಾಡುವುದೋ ಸರ್?
ಅವೆರಡೂ ಮರ್ಯಾದಸ್ಥರು ಮಾಡುವುದು. ಮಿಕ್ಕವರು ಮತ ಹರಾಜ್ ಮಾಡುವರು.

ರಾಮಸ್ವಾಮಿ, ಭೀಮನಕಟ್ಟೆ
ಪಕ್ಷಾಂತರಿಗಳನ್ನೆಲ್ಲಾ ಸೇರಿಸಿ ಪಕ್ಷ ಕಟ್ಟಬೇಕೆಂದಿದ್ದೇನೆ. ಹೆಸರು ಏನಿಡಲಿ?
ಯಾರು ಯಾವಾಗ ಎತ್ತ ನೆಗೆಯುವರೆಂದು ತಿಳಿಯದ್ದರಿಂದ ಸ್ಪ್ರಿಂಗ್‌ಬರ್ಡ್ ಪಕ್ಷ ಎಂದಿಡಿ.

ಸಿ.ಕೆ. ಗಣಪ್ಪನವರ, ಮುಂಡರಗಿ
ಐದು ವರ್ಷಕ್ಕೊಮ್ಮೆ ಬರುವ ಚುನಾವಣೆಗಳನ್ನು ಎರಡು ವರ್ಷಕ್ಕೆ ನಡೆಸಿದರೆ ಏನಾಗಬಹುದು?
ದೇಶವನ್ನು ಇನ್ನೂ ಬೇಗ ವಿದೇಶಿಗರಿಗೆ ಮಾರಬಹುದು.

ಕೆ.ಸಿ. ಸತ್ಯನಾರಾಯಣ, ದೊಡ್ಡಬಳ್ಳಾಪುರ
ಅತ್ತೆಗೊಂದು ಕಾಲ, ಸೊಸೆಗೊಂದು ಕಾಲ. ಮಾವನಿಗೆ/ಗಂಡನಿಗೆ ಯಾವ ಕಾಲ?
ಮಾವನಿಗೆ ಗುಳಿಗೆ ಕಾಲ; ಪತಿಗೆ ಯಮಗಂಡ ಕಾಲ.

## ಬಹುಮಾನಿತ ಪ್ರಶ್ನೆ

ಜೀವಿ, ಗೊಂಡೇದಹಳ್ಳಿ
ಎಲ್ಲ ಕಡೆ ಅಮ್ಮನ ಹಬ್ಬ ಅಂತ ಮಾಡ್ತಾರೆ. ಅಪ್ಪನ ಹಬ್ಬ ಅಂತ ಯಾಕೆ ಮಾಡಲ್ಲ?
ಅಮ್ಮನ ಹಬ್ಬಕ್ಕೇಂತ ಜನ ಆಕಡೆ ಹೋದ್ಮೇಲೆ ಅಪ್ಪ ಇದ್ದಲ್ಲೇ ಹಬ್ಬ ಆಚರಿಸ್ತಾನಂತೆ.

ಅನಸೂಯ ಟಿ, ಕೇದಿಗೆಮನೆ
ಫೇಸ್ಬುಕ್ ಸಾಹಿತಿಗಳಿಗೆ ಅವರ ಹಿಂಬಾಲಕರದೇ ಚಿಂತೆಯಂತೆ. ಇದಕ್ಕೆ ನಗ್ಬೇಕಾ, ಅಳ್ಬೇಕಾ?
‘ನಕ್ಕರೂ ಸರಿ, ಅತ್ತರೂ ಸರಿ; ಲೈಕ್, ಕಾಮೆಂಟ್ ಮರೆಯಬೇಡಿ’ ಎಂದನಾ ಮುಖಪುಸ್ತಕಿ.

ಸಿಹಿಮೊಗೆ ರಮೇಶ್, ಮೈಸೂರು
‘ಬಿಗ್‌ಬಾಸ್’ ರಿಯಾಲಿಟಿ ಶೋ ಸಮಾಜಕ್ಕೆ ಯಾವ ಸಂದೇಶವನ್ನು ಕೊಡಬಹುದು?
ತಿಕ್ಕಲುತನ, ನಿರ್ಲಜ್ಜೆಯಿಂದಲೂ ಟಿಆರ್‌ಪಿ ಪಡೆಯಬಹುದು ಎಂದು.

ರಾಜೀವ್ ಎನ್. ಮಾಗಲ್, ಸಕಲೇಶಪುರ
ಸರ್ಕಾರದ ಕೆಲಸ ದೇವರ ಕೆಲಸ. ಲಂಚ ಪಡೆಯೋದು ಯಾರ ಕೆಲಸ?



ಛೀ! ಅದು ಲಂಚವಲ್ಲ; ತಮ್ಮ ಕೆಲಸವಾಗಲೆಂದು ಜನ ತೆಗೆದಿರಿಸುವ ಮುಡಿಪು.

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ
ಕತ್ತೆಯಷ್ಟು ವಯಸ್ಸಾಯಿತು ಎಂದರೇನು?
ಕತ್ತಿನವರೆಗೆ ಮಾತ್ರ ವಯಸ್ಸಾಯಿತು; ತಲೆ/ಬುದ್ಧಿಗೆ ಆಗಲಿಲ್ಲ ಎಂದು.

ಮಲ್ಲಿಕಾರ್ಜುನ, ಸುರಧೇನುಪುರ
ತಾಳಿದವನು ಬಾಳಿಯಾನು. ತಾಳದವನು?
ರಾಗವಾಗಿ ಹಾಡಿಕೊಂಡು ಓಡಾಡಿಯಾನು.

■ ರಾಮ್